ಗೋಡೆ ತೆಳ್ಳಗಾದ್ದರಿಂದ, ಕಬ್ಬಿಣದ ದಪ್ಪ ಸರಳು ಬೇಕಾಗದ್ದರಿಂದ, ವೆಚ್ಚ ಕಡಿಮೆ. ಈ ತಂತ್ರಜ್ಞಾನ ನೀರಿನ ಟಾಂಕಿಗಳಿಗೆ ಸಾಕು. ಬಹಳ ದೃಢತೆ ಬೇಡುವ ರಚನೆಗಳಿಗೆ ಸಾಲದು.

ಸೋಜನ್ ಜೋಸೆಫ್ (47) ಕಾಸರಗೋಡು ಜಿಲ್ಲೆಯ ಬೀಮನಡಿ ನಿವಾಸಿ. ಫೆರೋಸಿಮೆಂಟ್ ಕಾಮಗಾರಿಯಲ್ಲಿ ಇವರದು ಎರಡು ದಶಕಗಳ ಅನುಭವ. ಹಲವು ಅನುಶೋಧನೆಗಳನ್ನೂ ಮಾಡಿದ್ದಾರೆ. ಇವರ ಹೆಚ್ಚಿನ ಕೆಲಸವೂ ಮಳೆಗುಡಾಣಗಳದೇ. ಲೆಕ್ಕ ಇಟ್ಟಿಲ್ಲ, ಆದರೆ ಈ ವರೆಗೆ 2000 ಟಾಂಕಿ ಮಾಡಿರಬಹುದು ಎನ್ನುತ್ತಾರೆ. ಹೆಚ್ಚಿನವೂ ಮನೆ ಬಳಕೆಗೆ. 10 ಸಾವಿರ ಲೀಟರಿನದು.

ಇವರ ಜತೆ ಸಹೋದ್ಯೋಗಿಗಳ ತಂಡವೇ ಇದೆ. ಕೇರಳ ಮಾತ್ರವಲ್ಲ, ಕರ್ನಾಟಕ, ತಮಿಳುನಾಡು, ಆಂಧ್ರ ಮತ್ತು ಜಾರ್ಖಂಡ್‌ಗಳಲ್ಲೂ ಇವರು ಕೆಲಸ ಮಾಡಿದ್ದಾರೆ. ಐದು ರಾಜ್ಯಗಳಲ್ಲಿ ಎರಡರಿಂದ ಮೂರು ಕೋಟಿ ಲೀಟರ್ ಮಳೆನೀರು ಹಿಡಿಯುವ ವ್ಯವಸ್ಥೆ ಮಾಡಿ ಕೊಟ್ಟಿದ್ದಾರೆ.

'ಸಾಮಾನ್ಯವಾಗಿ ಹೆಚ್ಚಿನವರೂ 20ರಿಂದ 30 ಸಾವಿರ ಲೀಟರಿನ ಫೆರೋಸಿಮೆಂಟ್ ಟಾಂಕಿ ಮಾಡುತ್ತಾರೆ. ನಾವು ಲಕ್ಷ, ಐದು ಲಕ್ಷ ಲೀಟರಿನವನ್ನೂ ಮಾಡಿದ್ದೇವೆ. ಈ ದೊಡ್ಡ ಟಾಂಕಿಗಳ ಡಿಸೈನ್ ನನ್ನದೇ. ಲಕ್ಷ ಲೀಟರ್ ಅಥವಾ ಹೆಚ್ಚು ಸಾಮರ್ಥ್ಯದ ಟಾಂಕಿ ಬೇರೆ ಯಾರೂ ಮಾಡಿದ್ದು ಕೇಳಿಲ್ಲ' ಎನ್ನುತ್ತಾರೆ ಸೋಜನ್. 'ಒಂದು ಲಕ್ಷ ಲೀಟರಿನ ಟಾಂಕಿಗೆ 4.5ರಿಂದ 5 ಲಕ್ಷ ರೂಪಾಯಿ ವೆಚ್ಚ ಬರಬಹುದು' ಎನ್ನುತ್ತಾರೆ.

## ಹತ್ತುಸಾವಿರದ್ದೇ ಜನಪ್ರಿಯ

10 ಸಾವಿರ ಲೀಟರಿನದಕ್ಕೆ 45–50 ಸಾವಿರ ರೂ. ವೆಚ್ಚ. ಇದಕ್ಕೆ ಮೂರೂವರೆ ಚದರ ಮೀಟರ್ ಜಾಗ ಬೇಕು. ಟಾಂಕಿಯನ್ನು ಭೂಗತವಾಗಿಯೂ ಮಾಡಬಹುದು, ನೆಲದ ಮೇಲೂ ಸಾಧ್ಯ. ನೆಲದ ಮೇಲೆ ಮಾಡಿದರೆ ನೀರು ತೆಗೆದು ಬಳಸಲು ಸುಲಭ. ನೆಲದ ಕೆಳಗಾದರೆ ಕೈಪಂಪು ಅಥವಾ ಪುಟ್ಟ ಪಂಪು ಬೇಕು.

ಜಂಬಿಟ್ಟಿಗೆಯಂತಹ ಗಟ್ಟಿ ಮಣ್ಣಿನ ಪ್ರದೇಶವಾದರೆ, ನೆಲದ ಅಡಿಯಲ್ಲಿ ಮಾಡಿಸಿಕೊಂಡರೆ, ಕಡಿಮೆ ಸಿಮೆಂಟ್ ಸಾಕು; ಖರ್ಚು ಕಡಿಮೆ. ಆದರೆ ಅಲ್ಲಿ ಗುಂಡಿ ತೆಗೆಯಲು ಬೇಕಾದ ವೆಚ್ಚವನ್ನೂ ಸೇರಿಸಿ ಹೋಲಿಸಬೇಕು. ಟಾಂಕಿ ನೆಲದಡಿಯಲ್ಲಿದ್ದರೆ ಮೇಲ್ಭಾಗ ಬಳಕೆಗೆ ಸಿಗುತ್ತದೆ.

'ಜಲನಿಧಿ' ಯೋಜನೆಯಡಿ ಕೇರಳದಲ್ಲಿ ಈ ತಂಡ ನೂರಾರು ಟಾಂಕಿ ಮಾಡಿದ್ದಿದೆ. ಕಾಸರಗೋಡು ಜಿಲ್ಲೆಯ ಕುಂಬ್ಡಾಜೆ ಪಂಚಾಯತ್, ಕೋಡೋಂಬೆಳ್ಳೂರು ಪಂಚಾಯತ್ ಇದಕ್ಕೆ ಉದಾಹರಣೆಗಳು. ಕೋಡೋಂಬೆಳ್ಳೂರಿನಲ್ಲಿ ನಿರ್ಮಾಣವಾದ ಒಟ್ಟು 600 ಟಾಂಕಿಗಳಲ್ಲಿ ಸೋಜನ್ ತಂಡ ಮಾಡಿದ್ದೇ 300. ಕುಂಬ್ಡಾಜೆಯಲ್ಲಿ ನೂರು. 'ಇವು ಒಂದೇ ಪ್ರದೇಶದಲ್ಲಿ ನಾವು ನಿರ್ಮಿಸಿದ ಗರಿಷ್ಠ ಸಂಖ್ಯೆಯ ಟಾಂಕಿಗಳು' ಎನ್ನುತ್ತಾರೆ ಇವರು.

## ಉಪ್ಪುನೀರಿನಿಂದ ಮುಕ್ತಿಗೆ

ಕೇರಳದ ಕಣ್ಣೂರು ನಗರದ ಅನತಿ ದೂರದಲ್ಲಿದೆ ಕಣ್ಣಪುರಂ. ಅಲ್ಲೂ ಉಪ್ಪುನೀರಿನ ಸಮಸ್ಯೆ. ಅಲ್ಲಿ ಇವರು ಸುಮಾರು 40 ಟಾಂಕಿ ಮಾಡಿದ್ದಾರೆ. ಹೆಚ್ಚಿನವೂ 10 ಸಾವಿರದವು; ಕೆಲವು ಮಾತ್ರ 20 ಸಾವಿರದ್ದು. '40 ಸಾವಿರ ಲೀಟರ್ ಇದ್ದರೆ ಒಂದು ಬಡ ಕುಟುಂಬ ಮುಖ್ಯ ಕೆಲಸಗಳಿಗೆ ವರ್ಷವಿಡೀ ಮಳೆನೀರನ್ನೇ ಬಳಸಬಹುದು' ಎನ್ನುತ್ತಾರೆ.

'ಫೆರೋಸಿಮೆಂಟ್ ಟಾಂಕಿಯನ್ನು ಆಯತ ಅಥವಾ ಚೌಕಾಕಾರದಲ್ಲಿ ನಿರ್ಮಿಸಿದರೆ ದೃಢತೆ ಕಮ್ಮಿ. ತೆರೆದ ಬಾವಿ ಉರುಟಾಗಿರುವ ಕಾರಣಕ್ಕೇ ಸುಲಭದಲ್ಲಿ ಕುಸಿಯುವುದಿಲ್ಲ. ಅದಕ್ಕೆ ಬೀಳುವ ಒತ್ತಡ ನ್ಯೂಟ್ರಲೈಸ್ ಆಗುತ್ತದೆ' ಎಂದು ಸೋಜನ್ ವಿವರಿಸುತ್ತಾರೆ.

ಸೋಜನ್ ಗಾರೆ ಕೆಲಸದ ಹಿನ್ನೆಲೆಯಿಂದ ಬಂದವರಲ್ಲ. ಅವರು ಓದಿದ್ದು ಐಟಿಐ ಡಿಪ್ಲೊಮಾ. ಸ್ವಲ್ಪ ಕಾಲ ರೇಡಿಯೋ ರಿಪೇರಿ. ನಡುವೆ ಅಧ್ಯಾತ್ಮದತ್ತ ಒಲವು. ಈ ಬಗ್ಗೆ ಅಧ್ಯಯನ ಮಾಡಿ ಅಲ್ಲಲ್ಲಿ ಶಿಬಿರ ನಡೆಸುತ್ತಿದ್ದರು.

ಬದುಕಿನ ಕವಲುದಾರಿಯಲ್ಲಿದ್ದ ತರುಣ ಫೆರೋಸಿಮೆಂಟ್ ನಿಪುಣನಾದದ್ದು ಪರಿಸ್ಥಿತಿಯ ಒತ್ತಡದಿಂದ. ಒಮ್ಮೆ ಶಿವಮೊಗ್ಗದ ಹತ್ತಿರದ ಹಳ್ಳಿಗೆ ಹೋಗಿದ್ದರು. ಅಲ್ಲಿ ನೀರಿಗೆ ತೀವ್ರ ಬರ. ಹೆಣ್ಣುಮಕ್ಕಳು ನೀರು ತರಲು ಬೆಳಗ್ಗೆ ಹೊರಟರೆ ಮರಳುವಾಗ ಮಧ್ಯಾಹ್ನ ಆಗುತ್ತಿತ್ತಂತೆ. ಸ್ವಲ್ಪ ಕಾಲದ ನಂತರ ಆಂಧ್ರದಲ್ಲೂ ಇದೇ ಸ್ಥಿತಿ ಕಂಡು ಮರುಗಿದರು. 'ಈ ಸಂಕಟ ಹೇಗೆ ಪರಿಹರಿಸಬಹುದು' ಎಂಬ ಚಿಂತೆ ಮನದಲ್ಲೇ ಉಳಿಯಿತು.

## ಆರು ವರ್ಷದ ಆತಂಕ

ಈ ನಡುವೆ ಸೋಜನ್ ಅವರಿಗೆ ಗಂಭೀರ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿತು. ಹೃದಯದ ವಾಲ್ವಿನಲ್ಲಿ ತೊಂದರೆ. ವರ್ಷದೊಳಗೇನೇ ಶಸ್ತ್ರಚಿಕಿತ್ಸೆ ನಡೆಸಿ ವಾಲ್ವ್ ಬದಲಾಯಿಸಬೇಕು ಅಂದರು ವೈದ್ಯರು. ಮೂರು ಲಕ್ಷ ರೂ. ಬೇಕಿತ್ತು. ಇವರ ಕಿಸೆ ಖಾಲಿ. ಏನಾದರೂ ಕೆಲಸ ಮಾಡಿ ಬೇಗನೆ ಹಣ ಸಂಪಾದಿಸಬೇಕಿತ್ತು. ಹುಡುಕತೊಡಗಿದರು.

ಅದು ಆರೋವಿಲೆಯಿಂದ ಕೇರಳಕ್ಕೆ

ಬೃಹತ್ ಟಾಂಕಿಗಾಗಿ ಹೊಂಡ ನಿರ್ಮಾಣ



## ಬಾವಿ ಮರುಜೀವವೋ, ಟಾಂಕ್ ಸಂಗ್ರಹವೋ

ಕೇರಳ ಬಾವಿಗಳ ರಾಜ್ಯ. ಜಗತ್ತಿನಲ್ಲೇ ಗರಿಷ್ಠ ಬಾವಿಗಳ ಸಾಂದ್ರತೆ ಇರುವುದು ಇಲ್ಲಿ. ಬೇಸಿಗೆ ಕೊನೆಗೆ ಬಾವಿ ಬತ್ತುವ ಕಾರಣಕ್ಕಾಗಿ ಕೊಳವೆಬಾವಿ ತೋಡಿಸಿದವರು ಹಲವರು. ಪ್ರಚಾರ ಕೇಳಿ ಫೆರೋಸಿಮೆಂಟ್ ಟಾಂಕಿ ಮಾಡಿಕೊಂಡವರು ಇನ್ನು ಕೆಲವರು.

ಬಾವಿ ಬತ್ತುವ ಮನೆಯವರು ತಮ್ಮ ಚಾವಣಿಯ ನೀರನ್ನು ಬಾವಿಗಿಳಿಸಿ, ನಿವೇಶನದ ನೀರನ್ನು ಇಂಗಿಸಿದರೆ ಬಾವಿ ಮತ್ತೆ ನೀರು ಕೊಡಬಹುದು. ಇದು ಕಡಿಮೆ ವೆಚ್ಚದ, ದೀರ್ಘಕಾಲೀನ ಫಲಿತಾಂಶದ, ನಿರ್ವಹಣೆ ಬೇಕಾಗದ ಪರಿಹಾರ. ಜಲಮಟ್ಟ ವೃದ್ಧಿಯಾಗುವ ಕಾರಣ ಈ ವಿಧಾನದಲ್ಲಿ ಸಾಮಾಜಿಕ ನ್ಯಾಯವೂ ಇದೆ.

ಎರಡು ಸಾವಿರದಿಂದ 3000 ಮಿ.ಮೀ. ಮಳೆಯ ಜಿಲ್ಲೆಗಳು ಎಷ್ಟು ಜಲಸಮೃದ್ಧ ಗೊತ್ತೇ? ಅಲ್ಲಿ ಅತಿ ಬಡವರ ಮನೆಯ ಸೂರಿಗೆ ಸುರಿಯುವ ನೀರೂ ಇಡೀ ಕುಟುಂಬಕ್ಕೆ ವರ್ಷವಿಡೀ ಸಾಕು. ಇದನ್ನೇ ಸೋಸಿ ಬಾವಿಗಿಳಿಸಿದರೆ, ಸಾಮಾನ್ಯ ಪರಿಸ್ಥಿತಿಯಲ್ಲಿ ಬಾವಿ ಬತ್ತಲಾರದು.